# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
## MANGALURU ELECTRICITY SUPPLY COMPANY LIMITED
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN:U40109KA2002SGCO30425
ದೂರವಾಣಿ ಸಂಖ್ಯೆ:0824-2885766

ಪ್ರವ್ಯ/ಸಪ್ರವ್ಯ(ಆ)/ಲೆಅ/ಸಲೆಅ/ಸುತ್ತೋಲೆ/ಕ-ಎ101/2020-21 / 093-05 ದಿನಾಂಕ: 18-5-20

ಅಧೀಕ್ಷಕ ಇಂಜಿನಿಯರ್ (ವಿ) (ಮಾಹಿತಿ ತಂತ್ರಜ್ಞಾನ) ಮಂ.ವಿ.ಸ.ಕಂ.ನಿ., ಮಂಗಳೂರು
ಸಂಖ್ಯೆ: 51
ದಿನಾಂಕ: 19-5-2020

# ಸುತ್ತೋಲೆ

ವಿಷಯ : ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಮೆಸ್ಕಾಂ.,ನಲ್ಲಿ ನಡೆಸಲಾಗುತ್ತಿರುವ ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಅಧಿಕಾರಿಗಳು/ನೌಕರರು ಹಾಜರಾಗದೇ ಇರುವ ಕುರಿತು.

*********

ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಮೆಸ್ಕಾಂ.,ನಲ್ಲಿ ನಡೆಸಲಾಗುತ್ತಿರುವ/ನಿಯೋಜಿಸಲಾದ ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಅಧಿಕಾರಿಗಳು/ನೌಕರರು ಹಾಜರಾಗದೇ ತರಬೇತಿ ಕಾರ್ಯಕ್ರಮಗಳನ್ನು ಹಗುರವಾಗಿ ಪರಿಗಣಿಸಿ ಸರಿಯಾಗಿ ಸ್ಪಂದಿಸದೇ ಇರುವುದು, ಮುಂದಿನ ದಿನಗಳಲ್ಲಿ ತರಬೇತಿಗೆ ಹಾಜರಾಗುತ್ತೇನೆಂದು ಉದ್ಧಟತನದಿಂದ ವರ್ತಿಸುವುದು ಹಾಗೂ ತರಬೇತಿಗೆ ನಿಯೋಜಿಸಲಾದ ಅಧಿಕಾರಿ/ನೌಕರರು ತರಬೇತಿಗೆ ಅಲಭ್ಯತೆಯ ಬಗ್ಗೆ ನಿಯಂತ್ರಣಾಧಿಕಾರಿಗಳ ಗಮನಕ್ಕೆ ತಂದರೂ ಪರ್ಯಾಯ ವ್ಯವಸ್ಥೆಯನ್ನು ಮಾಡದೇ ಇರುವುದು. ಮೊದಲ ದಿನದ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿ ಮಾಹಿತಿ ನೀಡದೇ ಗೈರುಹಾಜರಾಗುವುದು, ತರಬೇತಿಗೆ ಹಾಜರಾಗಿ ಒಂದು ಅಥವಾ ಎರಡು ಕ್ಲಾಸ್‌ನಲ್ಲಿ ಭಾಗವಹಿಸಿ ತದನಂತರ ಗೈರು ಹಾಜರಾಗುವುದು ಮತ್ತು ತರಬೇತಿಯಲ್ಲಿ ಪಾಠ ನಡೆಯುತ್ತಿರುವಾಗ ಕಛೇರಿ/ಕಂಪೆನಿಯ ಕೆಲಸದ ನಿಮಿತ್ತವೆಂದು ಪದೇ ಪದೇ ತರಬೇತಿಗಳಿಂದ ಹೊರಗೆ ಹೋಗಿ ಅಶಿಸ್ತಿನಿಂದ ವರ್ತಿಸುವುದು ಕಂಡು ಬಂದಿರುತ್ತದೆ.

ಆದ್ದರಿಂದ, ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಿಂದ ನಿಯೋಜಿಸಲಾದ/ನಡೆಸಲಾಗುತ್ತಿರುವ ತರಬೇತಿ ಕಾರ್ಯಕ್ರಮಗಳು ಸುಸೂತ್ರವಾಗಿ, ಶಿಸ್ತುಬದ್ಧವಾಗಿ ನಡೆಸಲು ಅಧೀಕ್ಷಕ ಇಂಜಿನಿಯರ್(ವಿ), ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಮೆಸ್ಕಾಂ., ಮಂಗಳೂರು ರವರಿಗೆ ತಪ್ಪಿತಸ್ಥರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಈ ಕೆಳಗಿನಂತೆ ಅಧಿಕಾರವನ್ನು ನೀಡಿದೆ.

- **ವಲಯ/ವೃತ್ತ/ವಿಭಾಗ/ಉಪವಿಭಾಗ/ಶಾಖಾಧಿಕಾರಿಯ ಕಛೇರಿಯಿಂದ ತರಬೇತಿಗೆ ತೈನಾತಿಸಲಾಗಿರುವ ಅಧಿಕೃತ ಜ್ಞಾಪನಾ ಪತ್ರದಂತೆ ತರಬೇತಿಗೆ ಗೈರು ಹಾಜರಾಗುವ ಅಧಿಕಾರಿ/ನೌಕರರ ಮಾಸಿಕ ಸಂಬಳದಿಂದ ತರಬೇತಿಗೆ ತಗಲಿರುವ ಖರ್ಚು ವೆಚ್ಚಗಳನ್ನು ಸದರಿ ಅಧಿಕಾರಿ/ನೌಕರರುಗಳ ಮಾಸಿಕ ಸಂಬಳದಿಂದ ಕಡಿತಗೊಳಿಸಿ ಆದೇಶ ಹೊರಡಿಸಲು ಮತ್ತು ಗೈರು ಹಾಜರಿಯನ್ನು ದುರ್ವರ್ತನೆ ಎಂದು ಪರಿಗಣಿಸಿ ಶಿಸ್ತು ಕ್ರಮವನ್ನು ಕೈಗೊಳ್ಳಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲು.**
- **ತರಬೇತಿಗೆ ನಿಯೋಜಿಸಲಾದ ಅಧಿಕಾರಿ/ನೌಕರರನ್ನು ತರಬೇತಿಗೆ ಬಿಡುಗಡೆ ಮಾಡದ ನಿಯಂತ್ರಣಾಧಿಕಾರಿಗಳಿಗೆ ನೋಟೀಸು ಜಾರಿಗೊಳಿಸಿ ಶಿಸ್ತು ಕ್ರಮ ತೆಗೆದುಕೊಳ್ಳಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲು.**

ಆದುದರಿಂದ ತರಬೇತಿಗೆ ನಿಯೋಜಿಸಲ್ಪಟ್ಟ ಅಧಿಕಾರಿ/ನೌಕರರು ತಪ್ಪದೇ ತರಬೇತಿಗೆ ಹಾಜರಾಗುವುದು ಹಾಗೂ ನಿಯಂತ್ರಣಾಧಿಕಾರಿಯವರು ತರಬೇತಿಗೆ ನಿಯೋಜಿಸಲ್ಪಟ್ಟ ಅಧಿಕಾರಿ/ನೌಕರರನ್ನು ಸಮಯಕ್ಕೆ ಸರಿಯಾಗಿ ಕರ್ತವ್ಯದಿಂದ ಬಿಡುಗಡೆಗೊಳಿಸುವುದು.

ಆದೇಶದ ಮೇರೆಗೆ,

(ಸಹಿ)
18-5

ಪ್ರಧಾನ ವ್ಯವಸ್ಥಾಪಕರು (ಆ&ಮಾ.ಸಂ.ಅ.)
ಮೆಸ್ಕಾಂ.,

AEE(IT-2)
19/5/20

Z:\Admins\2019-20\shwetha\Suthole.docx

ಪ್ರತಿಗಳು :

1. ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೆಸ್ಕಾಂ., ಮಂಗಳೂರು/ಶಿವಮೊಗ್ಗ.
2. ಅಧೀಕ್ಷಕ ಇಂಜಿನಿಯರ್(ವಿ), (ತಾಂತ್ರಿಕ)/(ವಾಣಿಜ್ಯ)/(ಖರೀದಿ)(ಯೋಜನೆಗಳು), ಮೆಸ್ಕಾಂ., ಕಾರ್ಪೋರೇಟ್ ಕಛೇರಿ
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತಗಳು/ಮೆಸ್ಕಾಂ.,
4. ಅಧೀಕ್ಷಕ ಇಂಜಿನಿಯರ್ (ವಿ)(ಸ್ಕಾಡಾ)/(ಮಾ.ಸಂ.ಅ.)/(ಆರ್.ಟಿ.), ಮೆಸ್ಕಾಂ, ಮಂಗಳೂರು.
5. ಕಂಪೆನಿ ಕಾರ್ಯದರ್ಶಿ, ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು.
6. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಮೆಸ್ಕಾಂ., ಕಾರ್ಪೊರೇಟ್ ಕಚೇರಿ, ಮಂಗಳೂರು.
7. ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಐಟಿ), ಮೆಸ್ಕಾಂ., ಕಾರ್ಪೊರೇಟ್ ಕಚೇರಿ, ಮಂಗಳೂರು
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ವಿಭಾಗಗಳು, ಮೆಸ್ಕಾಂ.
9. ಲೆಕ್ಕಾಧಿಕಾರಿ (ಸಾ.ಸಂ&ಸಂ), ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು
10. ಎಲ್ಲಾ ಲೆಕ್ಕಾಧಿಕಾರಿಗಳು/(ಆಂ.ಪ.), ಕಾರ್ಯ ಮತ್ತು ಪಾಲನಾ ವಿಭಾಗಗಳು, ಮೆಸ್ಕಾಂ.,
11. ಸಿಸ್ಟಂ ಮ್ಯಾನೇಜರ್, ಕಾರ್ಪೋರೇಟ್ ಕಛೇರಿ, ಮೆಸ್ಕಾಂ., ಮಂಗಳೂರು – ಕಂಪೆನಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ತಿಳಿಸಲಾಗಿದೆ.
12. ಹಿರಿಯ ಆಪ್ತ ಕಾರ್ಯದರ್ಶಿಗಳು ವ್ಯ.ನಿ/ನಿ(ತಾಂ), ಮೆಸ್ಕಾಂ., ಮಂಗಳೂರು.
13. ಆಪ್ತ ಕಾರ್ಯದರ್ಶಿಗಳು ಮು.ಆ.ಅ /ಆ.ಸ.(ಆಂ.ಪ.), ಮೆಸ್ಕಾಂ., ಮಂಗಳೂರು.